Government of Karnataka
Deposition Sheet Form No. R.P. 57

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಲಿಂಗಸಗೂರ

ಸಿ/ ಸಿ ನಂಬರಃ 294/2020

ಸಿ ಡಬ್ಲ್ಯೂ- 06
ಪಿ ಡಬ್ಲ್ಯೂ- 07

| | |
|---|---|
| ಸಾಕ್ಷಿದಾರರ ಹೆಸರು | ಃ- ನಾಗಾರ್ಜುನ |
| ತಂದೆಯ ಹೆಸರು | ಃ- ದೇವೇಂದ್ರಪ್ಪ |
| ವಯಸ್ಸು | ಃ- 45 ವರ್ಷ |
| ಉದ್ಯೋಗ | ಃ- ಪೋಲಿಸ್ ಪೇದೆ ಹಟ್ಟಿ ಪೋಲಿಸ್ ಠಾಣೆ |
| ವಾಸಸ್ಥಳ | ಃ- ಹಟ್ಟಿ |

ದಿ.27-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ.**

ದಿನಾಂಕ 15-05-2015 ರಿಂದ 20-10-2021 ವರೆಗೆ ನಾನು ಪೋಲಿಸ್ ಜೀಪ್ ಚಾಲಕನಾಗಿ ಲಿಂಗಸುಗೂರು ಪೋಲಿಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 25-08-2019 ರಂದು ಮದ್ಯಾಹ್ನ 3-00 ಗಂಟೆಗೆ ನಾನು ಚಾ.ಸಾ-16 ರವರ ಜೊತೆ ಲಿಂಗಸುಗುರು ಠಾಣೆಯಲ್ಲಿ ಇದ್ದಾಗ ಸುಮಾರು 150-200 ಜನ ಸೇರಿದ್ದರು. ವಶಕ್ಕೆ ಪಡೆದುಕೊಂಡ ಆರೋಪಿ ಸೈಯದ್ ಈತನು ತನ್ನ ಪೇಸ್ ಬುಕ್ ಖಾತೆಯಲ್ಲಿ ಶಿವಾಜಿ, ಸಂಗೋಳ್ಳಿ ರಾಯಣ್ಣ ಮತ್ತು ವಾಲ್ಮಿಕಿ ರವರ ಭಾವಚಿತ್ರಗಳ ಮೇಲೆ ಟಿಪ್ಪುಸುಲ್ತಾನರವರು ಎಡಗಾಲನ್ನು ಶಿವಾಜಿಯವರ ತಲೆಯ ಮೇಲೆ ಇಟ್ಟಂತೆ ಭಾವಚಿತ್ರವನ್ನು ಸಾಮಾಜಿಕ ಜಾಲತಾನದಲ್ಲಿ ಹರಿ ಬಿಟ್ಟು ಹಿಂದೂ ಧರ್ಮದವರ ಭಾವನೆಗೆ ಧಕ್ಕೆಯುಂಟು ಮಾಡಿದ ಬಗ್ಗೆ ಕೇಸು ದಾಖಲಾಗಿತ್ತು. ಅವನ ಮೇಲೆ ಆಕ್ರೋಶಗೊಂಡ ಜನರು ನೀವು ಪೋಲಿಸರು ಕೇಸ್ ಮಾಡುತ್ತೀರಿ ಆಮೇಲೆ ಬಿಟ್ಟು ಬಿಡುತ್ತಿರಿ ಎಂದು ಅವನನ್ನು ನಮ್ಮ ವಶಕ್ಕೆ ಕೊಟ್ಟುಬಿಡಿ ಎಂದು ಕೂಗಾಡುತ್ತಿದ್ದರು. ಸ್ಥಳದಲ್ಲಿದ್ದ ಪಿಡ್ಡನಗೌಡ, ನಂದೀಶ ನಾಯಕರವರು ಜನರಿಗೆ ಅವನನ್ನು ಪೋಲಿಸರು ನ್ಯಾಯಾಂಗ ಬಂದನಕ್ಕೆ ಒಪ್ಪಿಸುತ್ತಾರೆ ನೀವು ಇಲ್ಲಿಂದ ಹೊರಟು ಬಿಡಿ ಎಂದು ಎಷ್ಟು ಸಾರಿ ಹೇಳಿದರೂ ಅವರು ಅಲ್ಲಿಂದ ಹೋಗಿರುವುದಿಲ್ಲ. ನಂತರ ಚಾ.ಸಾ-16 ರವರು ಸದರಿ ಆರೋಪಿಯ ನ್ಯಾಯಾಂಗ ಬಂದನಕ್ಕೆ ಒಪ್ಪಿಸಲು ಚಾ.ಸಾ-1, 4, 5, 7 ಮತ್ತು 8 ರವರಿಗೆ ಬೆಂಗಾವಲು ಕರ್ತವ್ಯಕ್ಕೆ ನೇಮಿಸಿರುತ್ತಾರೆ. ನಾವು ಸಹ ಜೀಪಿನ ಹಿಂದುಗಡೆ ಹೊರಗಡೆ

ಹೊರಟಿರುತ್ತೇವೆ. ಸದರಿ ಆರೋಪಿಯನ್ನು ಕೆ.ಎ-36, ಜಿ-128 ಇಲಾಖಾ ವಾಹನದಲ್ಲಿ ಕರೆದುಕೊಂಡು ಹೋಗುತ್ತಿದ್ದಾಗ ಸಂಜೆ 4-30 ಕ್ಕೆ ಅರಣ್ಯ ಇಲಾಖೆಯ ಕಾರ್ಯಾಲಯದ ಮುಂದೆ ಸುಮಾರು 25-30 ಜನ ಸೇರಿ ನಮ್ಮ ಜೀಪನ್ನು ಅಡ್ಡಗಟ್ಟಿ ನಿಲ್ಲಿಸಿ ಅವನನ್ನು ನಮ್ಮ ವಶಕ್ಕೆ ಕೊಟ್ಟುಬಿಡಿ ಎಂದು ಲೇ ಸೂಳೆ ಮಕ್ಕಳೆ ಅವನನ್ನು ಎಲ್ಲಿಗೆ ಕರೆದಕೊಂಡು ಹೋಗುತ್ತಿದ್ದಿರಿ ಎಂದು ಅವಾಚ್ಯವಾಗಿ ಬೈದು ನಮ್ಮ ಕರ್ತವ್ಯಕ್ಕೆ ಅಡ್ಡಪಡಿಸಿರುತ್ತಾರೆ. ಅಲ್ಲಿಯೇ ಬಂದೋಬಸ್ತ ಕರ್ತವ್ಯದಲ್ಲಿದ್ದ ಚಾ.ಸಾ-9 ರಿಂದ 11 ರವರು ಸ್ಥಳಕ್ಕೆ ಬಂದು ಪ್ರತಿಭಟನೆ ಮಾಡುವುದು ಕಾನೂನು ಬಾಹಿರ ಎಂದು ತಿಳಿ ಹೇಳಿ ಗುಂಪನ್ನು ಚದುರಿಸಿರುತ್ತಾರೆ. ಅವರು ಮಾತನ್ನು ಕೇಳದೆ ಅಲ್ಲಿಯೇ ಇದ್ದ ಕಲ್ಲುಗಳನ್ನು ಜೀಪಿನ ಮೇಲೆ ಎಸೆದಿರುತ್ತಾರೆ. ಜೀಪಿನ ಹಿಂಬದಿ ಗ್ಲಾಸು ಒಡೆದು ಅದರಲ್ಲಿದ್ದ ಚಾ.ಸಾ-4 ರವರಿಗೆ ರಟ್ಟೆಗೆ ಮೂಕಪೆಟ್ಟಾಗಿರುತ್ತವೆ. ಚಾ.ಸಾ-5 ಕೈಗೆ ರಕ್ತಗಾಯವಾಗಿತ್ತು, ಚಾ.ಸಾ-7 ರವರಿಗೆ ಬಲಗೈ ಮುಂಗೈಗೆ ಗಾಯಗಳಾಗಿದ್ದವು. ನನಗೆ ಬಲಗೈ ಮುಂಗೈಗೆ ಕಲ್ಲು ಬಿದ್ದು ಪೆಟ್ಟಾಗಿರುತ್ತದೆ. ಚಾ.ಸಾ-1 ರವರಿಗೂ ಸಹ ಅವರ ಸಮವಸ್ತ್ರ ಹಿಡಿದು ಎಳೆದಾಡಿರುತ್ತಾರೆ. ಆರೋಪಿಯ ಸುರಕ್ಷತೆ ದೃಷ್ಟಿಯಿಂದ ನಾವು ಠಾಣೆಗೆ ವಾಪಸ್ಸು ಕರೆದುಕೊಂಡು ಬಂದಿರುತ್ತೇವೆ. ನಂತರ ಸಂಜೆ 6-15 ಕ್ಕೆ ಘಟನೆಯ ಕುರಿತು ಲಿಂಗಸುಗೂರು ಪೋಲಿಸ್ ಠಾಣೆಯಲ್ಲಿ ಚಾ.ಸಾ-1 ರವರು ದೂರು ಕೊಟ್ಟಿರುತ್ತಾರೆ.

3. ಅದೇ ದಿನ ಸಾರ್ವಜನಿಕರಿಂದ ಆರೋಪಿತರ ಹೆಸರುಗಳನ್ನು ಕೇಳಲಾಗಿ ದುರಗೇಶ ತಂದೆ ಸಣ್ಣಯಮನಪ್ಪ, ಯಮನೂರು ತಂದೆ ಪರಶುರಾಮ, ಗುಂಡಪ್ಪ ಮತ್ತು ಯಮನಪ್ಪ, ಚಂದಪ್ಪ ತಂದೆ ಓಬಣ್ಣ ಎಂದು ತಿಳಿದು ಬಂದಿರುತ್ತದೆ. ದಿನಾಂಕ 31-08-2019 ರಂದು ಲಿಂಗಸುಗುರು ಠಾಣೆಗೆ ಹಾಜರಾಗಿದ್ದು 1 ರಿಂದ 4 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತೇನೆ. ಚಾ.ಸಾ-1 ರವರ ಸಮವಸ್ತ್ರ ಹಿಡಿದು ಎಳೆದಾಡಿದ ತಿರುಪತಿ ಅವರ ಬಗ್ಗೆ ಮಾಹಿತಿ ತಿಳಿದು ಹೇಳಿಕೆ ಕೊಟ್ಟಿರುತ್ತೇನೆ. ದಿನಾಂಕ 05-09-2019 ರಂದು ಠಾಣೆಗೆ ಹಾಜರಾಗಿ ಇನ್ನೂಳಿದ ಆರೋಪಿಗಳಾದ ರವಿಕುಮಾರ, ಗಂಗಾಧರ, ತಿರುಪತಿ ಮತ್ತು ಕೇಶವ ವಿಡಿಯೋ ಚಿತ್ರಿಕರಣವನ್ನು ನೋಡಿ ಗುರುತಿಸಿ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1, 2, 4, 7 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. 3 ನೇ ಆರೋಪಿ ತಿರಿಕೊಂಡಿರುತ್ತಾನೆ. 5 ಮತ್ತು 6 ನೇ ಆರೋಪಿತರು ಗೈರಾಗಿದ್ದು ಗುರುತಿಸಲು ಯಾವುದು ತಕರಾರು ಇರುವುದಿಲ್ಲ. ಸಾಕ್ಷಿಯು ನಿ.ಪಿ-4 ರಿಂದ 7 ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಕಲ್ಲು ಮತ್ತು ಗಾಜಿನ ಚೂರುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮುದ್ದೇಮಾಲು-1 ಮತ್ತು 2 ಎಂದು ಗುರುತಿಸಲಾಗಿದೆ.

**<u>ಪಾಟೀ ಸವಾಲು: ಶ್ರೀ.ಎಸ್.ಹೆಚ್.ಜಿ ವಕೀಲರಿಂದ 1ನೇ ಆರೋಪಿಯ ಪರವಾಗಿ:-</u>**

ಲಿಮಗಸುಗುರು ಠಾಣೆಯಿಂದ ಎ.ಸಿ.ಕಚೇರಿಯ ರಸ್ತೆಯ ಮೂಲಕ ಆರೋಪಿಯನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಹೋಗುತ್ತಿದ್ದೇವು. ಪಶ್ಚಿಮದಿಂದ ಪೂರ್ವಕ್ಕೆ ಹೋಗುತ್ತಿದ್ದೆವು. ಘಟನಾ ಸ್ಥಳದ ಚೆಕ್ಕುಬಂದಿ ಉತ್ತರಕ್ಕೆ ಅರಣ್ಯ ಇಲಾಖೆಯ ಗೃಹಗಳು, ದಕ್ಷಿಣ ಸಾರ್ವಜನಿಕ ಉದ್ಯಾನವನ, ಪೂರ್ವಕ್ಕೆ ಬಸ್ ನಿಲ್ದಾಣಕ್ಕೆ ಹೋಗುವ ರಸ್ತೆ, ಪಶ್ಚಿಮಕ್ಕೆ ಕಸಬಾಲಿಂಗಸುಗೂರಿಗೆ ಹೋಗುವ ರಸ್ತೆ ಇದೆ. ಅಲ್ಲಿ ಸಾರ್ವಜನಿಕರು ಇದ್ದರು ಎಂದರೆ ಸರಿ. 25-30 ಜನ ಸೇರಿದ್ದರಿಂದ ಯಾರು ಕಲ್ಲುಗಳನ್ನು ಎಸೆದರು ಯಾರು ಅವಾಚ್ಯವಾಗಿ ಬೈದರು ಎಂದು ನನಗೆ ನಿಖರವಾಗಿ ಹೇಳಲಾಗುವದಿಲ್ಲ. ಗುಂಪಿನಿಂದ ಯಾರು ಕಲ್ಲು ಎಸೆದಿರುತ್ತಾರೆ ಎಂದು ನಿಖರವಾಗಿ ಹೇಳಲಾಗುವದಿಲ್ಲ. ನಾವು ಇದ್ದ ವಾಹನದ ನಂ.ಕೆಎ-36, ಜಿ-258 ಇರುತ್ತದೆ. ಗ್ಲಾಸ್ ಮುಚ್ಚಿದ್ದರಿಂದ ಕಲ್ಲುಗಳನ್ನು ಎಸೆದರೆ ಯಾರಿಗೂ ಗಾಯಗಳಾಗುವದಿಲ್ಲ ಎಂದರೆ ಸರಿಯಲ್ಲ. ನಾವು ಆರೋಪಿತನ ಕರೆದುಕೊಂಡು ಹೋಗುವ ವಾಹನದಲ್ಲಿ ಇರಲಿಲ್ಲ. ನಾನು ಹಿಂದಿನ ವಾಹನದಲ್ಲಿ ಇರುವದರಿಂದ ನಿಖರವಾಗಿ ಆ ಜೀಪನ್ನು ಯಾರು ಅಡ್ಡಗಟ್ಟಿ ನಿಲ್ಲಿಸಿರುತ್ತಾರೆ ಎಂದು ನನಗೆ ನಿಖರವಾಗಿ ಹೇಳಲಾಗುವುದಿಲ್ಲ ಎಂದರೆ ನನಗೆ ನೆನಪಿಲ್ಲ. ಆ ದಿನ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಜೀಪನ್ನು ಅಡ್ಡಗಟ್ಟಿ ನಿಲ್ಲಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು: ಶ್ರೀ.ಎಸ್.ಎಮ್.ಪಿ ವಕೀಲರಿಂದ 2 ರಿಂದ 4 ಮತ್ತು 6ನೇ ಆರೋಪಿತರ ಪರವಾಗಿ:-</u>**

ಆ ದಿನ ಪೋಲಿಸ್ ಠಾಣೆಯ ಮುಂದೆ 500-1000 ಜನ ಇದ್ದರು ಎಂದರೆ ಸರಿಯಲ್ಲ. ನಾವು 20-30 ಮೀಟರ್ ಅಂತರದಲ್ಲಿ ಇದ್ದೆವು ಯಾರು ಕಲ್ಲು ಎಸೆದರು ಎಂದು ನಿಖರವಾಗಿ ಹೇಳಲಾಗುವದಿಲ್ಲ. ಆ ದಿನ ಜೀಪಿನಲ್ಲಿದ್ದವರಿಗೆ ಯಾವುದೇ ಗಾಯಗಳಾಗಿರುವದಿಲ್ಲ ಎಂದರೆ ಸರಿಯಲ್ಲ. ಆ ದಿನ ನನ್ನ ಬಲಗೈಗೆ ಒಳಪೆಟ್ಟಾಗಿರುತ್ತದೆ. ನಾವು ಜಖಂ ಆಗಿರುವ ಜೀಪಿನಲ್ಲಿರಲಿಲ್ಲ ಹಿಂದಿರುವ ಜೀಪಿನಲ್ಲಿ ಇದ್ದೆ. ನಾವು ಹಿಂದುಗಡೆ ಜೀಪಿನಲ್ಲಿರುವದರಿಂದ ಈ ಘಟನೆಯ ಬಗ್ಗೆ ನನಗೆ ಸಂಪೂರ್ಣವಾದ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ದುರಗೇಶ ಈತನು ಆ ದಿನ ಅವಾಚ್ಯಾವಾಗಿ ಬೈದಿರುತ್ತಾನೆ. ಉಳಿದ ಆರೋಪಿರು ಯಾರು ಅವಾಚ್ಯವಾಗಿ ಬೈದಿರುತ್ತಾರೆ ಎಂದು ನನಗೆ ನೆನಪಿಲ್ಲ. ಲಿಂಗಸುಗೂರು ಠಾಣೆಯಲ್ಲಿ ಸುಮಾರು 500-1000 ಸೇರಿದ್ದರು ಪ್ರಕ್ಷಯಬ್ದ ವಾತಾವರಣ ಸೃಷ್ಟಿಯಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿತರು ಯಾವ ಉದ್ಯೋಗ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆ ದಿನ ಸುಮಾರು 500-1000 ಜನ ಸೇರಿದ್ದು ನಿಜವಾದ ಆರೋಪಿತರನ್ನು ಗುರುತಿಸದೆ ಸ್ಥಳದಲ್ಲಿ ಸಣ್ಣ ವ್ಯಾಪಾರಿಗಳಾದ ಹಣ್ಣು,

ತರಕಾರಿ ಮತ್ತು ಮೀನಿನ ವ್ಯಾಪಾರಿಗಳ ವಿರುದ್ದ ಸುಳ್ಳು ಕೇಸು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

2. ಆ ದಿನ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಜೀಪನ್ನು ಅಡ್ಡಗಟ್ಟಿ ನಿಲ್ಲಿಸಿಲ್ಲ ಪೋಲಿಸರಿಗೆ ಯಾವುದೇ ಗಾಯಗಳಾಗಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಆರೋಪಿತರ ವಿರುದ್ದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು: ಶ್ರೀ.ಹೆಚ್.ಬಿ ವಕೀಲರಿಂದ 7 ನೇ ಆರೋಪಿಯ ಪರವಾಗಿ:-</u>**

ಮೇಲಿನ ಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದು ಅನುಮತಿಸಲಾಯಿತು.

*(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)*

ಓ. ಹೇ. ಕೇ. ಸರಿ ಇದೆ.
ಸಹಿ/-

ಪ್ರಧಾನ ಸಿವಿಲ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ..
ಲಿಂಗಸಗೂರು.